ಕರ್ನಾಟಕ ಸರ್ಕಾರ

ಸೆಪ್ಟೆಂಬರ್ 25, 2017

# ನವ ಕರ್ನಾಟಕ 2025 ಮುನ್ನೋಟದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಯವರ ಭಾಷಣದ ಮುಖ್ಯಾಂಶಗಳು



ಬೆಂಗಳೂರು, ಸೆಪ್ಟೆಂಬರ್ 25:

ಕಳೆದ ನಾಲ್ಕೂವರೆ ವರ್ಷಗಳಲ್ಲಿ ಜನರಿಗೆ ಪ್ರಣಾಳಿಕೆ ಮೂಲಕ ನೀಡಿದ್ದ ಬಹುತೇಕ ಭರವಸೆಗಳನ್ನು ಈಡೇರಿಸಿದ್ದೇವೆ. ರಾಜ್ಯ ಪ್ರಗತಿ ಸಹ ಸಾಧಿಸಿದೆ.

ರಾಜ್ಯವನ್ನು ನವ ಕರ್ನಾಟಕವನ್ನಾಗಿ ನಿರ್ಮಾಣ ಮಾಡಲು ನಮ್ಮ ಚಿಂತನೆ, ಯೋಜನೆ, ಸಮಸ್ಯೆಗಳನ್ನು ಗುರುತಿಸುವಿಕೆ ಮತ್ತು ಅದರ ಪರಿಹಾರ ಈ ಎಲ್ಲವನ್ನೂ ಚರ್ಚೆ ಮೂಲಕ ಮಾಡಬೇಕು.

ಕಳೆದ ನಾಲ್ಕೂವರೆ ವರ್ಷದಲ್ಲಿ ಹಲವಾರು ಘೋಷಣೆಗಳನ್ನು ಮಾಡಿದ್ದೇವೆ. ಕರ್ನಾಟಕ ಹಸಿವು ಮುಕ್ತ, ಗುಡಿಸಲು ಮುಕ್ತ, ಅಪೌಷ್ಟಿಕತೆ ಮುಕ್ತ ರಾಜ್ಯ ಆಗಬೇಕು ಎಂಬುದು ನಮ್ಮ ನಿಲುವು ಮತ್ತು ಘೋಷಣೆ.

ಅನ್ನಭಾಗ್ಯ ಯೋಜನೆಯಲ್ಲಿ ತಲಾ ಏಳು ಕೆ.ಜಿ.ಅಕ್ಕಿಯನ್ನು ಉಚಿತವಾಗಿ ನಾಲ್ಕು ಕೋಟಿಗೂ ಹೆಚ್ಚು ಜನರಿಗೆ ನೀಡುತ್ತಿದ್ದೇವೆ. ಇದರ ಪರಿಣಾಮ ಭೀಕರ

ಬರಗಾಲದಲ್ಲೂ ಜನ ಗುಳೆ ಹೋಗುತ್ತಿಲ್ಲ. ಗುಳೆ ಹೋಗುವ ಸಮಸ್ಯೆ ಮೊದಲು ಸಾಮಾನ್ಯವಾಗಿತ್ತು.ಈಗ ಕಡಿಮೆ ಆಗಿದೆ. ಹಸಿವಿನಿಂದ ಯಾರೂ ಸತ್ತ ನಿದರ್ಶನ ಇಲ್ಲ. ಕರ್ನಾಟಕ ಹಸಿವು ಮುಕ್ತ ಆಗಿರುವುದಕ್ಕೆ ಇದು ಉದಾಹರಣೆ.

ಶಾಲಾ ಮಕ್ಕಳಿಗೆ ವಾರದಲ್ಲಿ ಐದು ದಿನ ಕೆನೆಭರಿತ ಹಾಲು ಕೊಡುತ್ತಿದ್ದೇವೆ. ಇದರಿಂದ ಅಪೌಷ್ಟಿಕತೆ ಸಮಸ್ಯೆ ಸಹ ಕಡಿಮೆಯಾಗಿದೆ.

ನಾಲ್ಕೂವರೆ ವರ್ಷದಲ್ಲಿ 12 ಲಕ್ಷ ಮನೆಗಳನ್ನು ಕಟ್ಟಿದ್ದೇವೆ. ರಾಜ್ಯವನ್ನು ಗುಡಿಸಲು ಮುಕ್ತ ಮಾಡುವ ಪ್ರಯತ್ನ ಇದು.

ನೀರಾವರಿಗೆ ಯೋಜನೆಗಳಿಗೆ ಪ್ರತಿ ವರ್ಷ ಹತ್ತು ಸಾವಿರ ಕೋಟಿ ವೆಚ್ಚ ಮಾಡುತ್ತಿದ್ದೇವೆ. 1.75 ಲಕ್ಷ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿದ್ದೇವೆ. ಇದು ದೇಶದಲ್ಲೇ ಮೊದಲ ಬಾರಿಗೆ ಜಾರಿಗೆ ತಂದ ವಿನೂತನ ಕಾರ್ಯಕ್ರಮ. ಎಪಿಎಂಸಿಗಳಲ್ಲಿ ಆನ್ ಲೈನ್ ಪದ್ಧತಿ ಜಾರಿಗೆ ತಂದು ದೇಶಕ್ಕೇ ಮಾದರಿಯಾಗಿದ್ದೇವೆ. ರೇಷ್ಮೆ ಗೂಡು ಮಾರಾಟಕ್ಕೂ ಆನ್ ಲೈನ್ ವ್ಯವಸ್ಥೆ ಜಾರಿಗೆ ತಂದಿದ್ದೇವೆ. ಇದರಿಂದ ಮಧ್ಯವರ್ತಿಗಳ ಹಾವಳಿ ನಿವಾರಣೆಯಾಗಿ ರೈತರಿಗೆ ಭಾರಿ ಅನುಕೂಲವಾಗಿದೆ.

ಕೃಷಿ ಲಾಭದಾಯಕ ಆಗದಿದ್ದರೆ, ಕೃಷಿ ಉತ್ಪನ್ನಗಳಿಗೆ ಸೂಕ್ತ ದರ ಸಿಗದಿದ್ದರೆ ಮತ್ತು ರೈತರಿಗೆ ಹೆಚ್ಚು ಲಾಭ ದೊರೆಯದಿದ್ದರೆ ಕೃಷಿ ವ್ಯವಸ್ಥೆಗೆ ಪೆಟ್ಟು ಬೀಳುತ್ತದೆ.

ಬಂಡವಾಳ ಹೂಡಿಕೆಯಲ್ಲೂ ರಾಜ್ಯ ಮೊದಲ ಸ್ಥಾನದಲ್ಲಿದೆ. ಕೈಗಾರಿಕೆ ಸ್ನೇಹಿ ರಾಜ್ಯ ಎಂಬ ಹೆಗ್ಗಳಿಕೆಗೂ ಕರ್ನಾಟಕ ಪಾತ್ರವಾಗಿದೆ.

ಪರಿಶಿಷ್ಟರ ಕಲ್ಯಾಣ ವಿಚಾರದಲ್ಲಿಯೂ ನಾವು ಹಿಂದೆ ಬಿದ್ದಿಲ್ಲ. ಅವರಿಗಾಗಿ ವಿಶೇಷ ಕಾಯಿದೆ ಜಾರಿಗೆ ತಂದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದೇವೆ. ಇದರಿಂದ ಪರಿಶಿಷ್ಟರ ಕಾಲೋನಿಗಳ ಸ್ವರೂಪವೇ ಬದಲಾಗಿದೆ.

ಬಯಲು ಬಹಿರ್ದೆಸೆ ಮುಕ್ತ ರಾಜ್ಯಕ್ಕಾಗಿ 30 ಲಕ್ಷಕ್ಕೂಹೆಚ್ಚು ಶೌಚಾಲಯಗಳನ್ನು ನಿರ್ಮಿಸಿದ್ದೇವೆ. 2018ರ ಅಕ್ಟೋಬರ್ 2ಕ್ಕೆ 50 ಲಕ್ಷ ಶೌಚಾಲಯಗಳೊಂದಿಗೆ ಕರ್ನಾಟಕ ಬಯಲು ಬಹಿರ್ದೆಸೆ ಮುಕ್ತ ರಾಜ್ಯ ಆಗಲಿದೆ.

ನವ ಕರ್ನಾಟಕ ಮುನ್ನೋಟ ಯೋಜನೆಯಲ್ಲಿ ಜನರೂ ಭಾಗಿಯಾಗಬೇಕು. ಜನರ ಸಮಸ್ಯೆ, ನಿರೀಕ್ಷೆ ಕೇಳಬೇಕು. ಜನ ಸಾಮಾನ್ಯರ ಜೊತೆಗೆ ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯವನ್ನು ಎಲ್ಲ ಜಿಲ್ಲೆಗೆ ಹೋಗಿ ಆಲಿಸಬೇಕು. ನಮಗೆ ಜನರ ಧ್ವನಿ ಮತ್ತು ಅವರ ಪಾಲ್ಗೊಳ್ಳುವಿಕೆ ಮುಖ್ಯ. ಹೀಗಾಗಿ ಈ ಕಾರ್ಯಕ್ರಮದ ಉದ್ಘಾಟನೆ ಆಗಿದೆ.

ನವ ಕರ್ನಾಟಕ ಮುನ್ನೋಟದಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ನಮ್ಮ ಮುಂದಿನ ಚುನಾವಣಾ ಪ್ರಣಾಳಿಕೆಯಲ್ಲೂ ಅಳವಡಿಸಿಕೊಳ್ಳಲಾಗುವುದು.

ಡಿಸೆಂಬರ್ ಅಂತ್ಯದ ವೇಳೆಗೆ ನವ ಕರ್ನಾಟಕ 2025 ಮುನ್ನೋಟದ ಸಮಗ್ರ ವರದಿ ಸಿದ್ಧವಾಗಲಿದೆ. ಆ ವೇಳೆಗೆ ಪ್ರತಿ ಜಿಲ್ಲೆಯಲ್ಲಿ ಎಲ್ಲರ ಅಭಿಪ್ರಾಯ ಆಲಿಸಿ ವರದಿ ಸಿದ್ಧಪಡಿಸಲಾಗುವುದು.

ಇದು ನಮ್ಮ ಕನಸು ಮತ್ತು ಬದ್ಧತೆ. ಕೇವಲ ಕನಸು ಕಂಡರೆ ಸಾಲದು. ಅದು ನನಸಾಗಬೇಕಾದರೆ ಒಂದು ಮುನ್ನೋಟ ಅಗತ್ಯ. ಅದಕ್ಕಾಗಿಯೇ ನವ ಕರ್ನಾಟಕ 2025 ರ ಮುನ್ನೋಟ ಯೋಜನೆ ರೂಪಿಸಲಾಗಿದೆ.

------------------------------